**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಕಾರವಾರ**

ಸಿ.ಸಿ. ನಂಃ 140/2014 ಪಿಡಬ್ಲೂಃ 4

ಸಿ.ಡಬ್ಲು ಃ 5

ಸಾಕ್ಷಿಧಾರರ ಹೆಸರು ಃ ಸಂದೇಶ್ ಕಾಶೀನಾಥ ಸಾಳುಂಕೆ

ವಯಸ್ಸು ಃ 50 ವರ್ಷ

ಉದ್ಯೋಗ ಃ ಕೂಲಿ ಕೆಲಸ

ವಾಸ್ತವ್ಯ ಃ ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 17-12-2018

**ಸಾಕ್ಷಿದಾರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಹಿಂದಿ ಭಾಷೆ ಬಲ್ಲವರಾಗಿದ್ದು ವಕೀಲರು ಸಾಕ್ಷಿ ಹಿಂದಿಯಲ್ಲಿ ಹೇಳಿದ್ದನ್ನು ನ್ಯಾಯಾಧೀಶರಿಗೆ ಹಿಂದಿ ಬರುತ್ತಿದ್ದು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ ಮಾಡಿಕೊಳ್ಳಲಾಯಿತು)**

***ಮುಖ್ಯ ವಿಚಾರಣೆಃ ಶ್ರೀಮತಿ ಎಪಿಪಿಯವರಿಂದ ಃ-***

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರತಿಸಿದ್ದರಿಂದ ಸದ್ರಿ ಪಂಚನಾಮೆಯನ್ನು ನಿಪಿ-3 ಎಂದು , ಅದರ ಮೇಲಿರುವ ಸಹಿಯನ್ನು ನಿಪಿ-3ಎ ಎಂದು ಗುರುತಿಸಲಾಯಿತು. ನಿಪಿ-3 ಮೇಲೆ ಸಹಿಯನ್ನು ದಿಃ 2008 ನೇ ವರ್ಷದಲ್ಲಿ ಚಾಸಾ-1 ರವರ ಮನೆಯಲ್ಲಿ ಪೋಲಿಸರು ಹೇಳಿದಂತೆ ಮಾಡಿರುತ್ತೇನೆ. ಪಂಚನಾಮಗಯಾಗಿ 10 ವರ್ಷಗಳಾದಕಾರಣ ನನ್ನೊನ್ನಂದಿಗೆ ಯಾರು ಇದ್ದರು ಎಂದು ನೆನಪಿಲ್ಲ. ನನಗೆ ವಿನಾಯಕ ಪಾಟೀಲ್ ಯಾರು ಎಂದು ಗೊತ್ತಿಲ್ಲ.

ಸಾಕ್ಷಿಗೆ ಈಗ ಸ್ವತ್ತು ಸಾಧೀನ ಪಂಚಾನಮೆಯನ್ನು ತೋರಿಸುತ್ತಿದ್ದು ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದ್ರಿ ಪಂಚನಾಮೆಯನ್ನು ನಿಪಿ-4 ಎಂದು , ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-4ಎ ಎಂದು ಗುರುತಿಸಲಾಯಿತು. ನಿಪಿ-4 ರ ಮೇಲೆ ಸಹಿಯನ್ನು ಯಾವಾಗ ಎಲ್ಲಿ , ಎಂದು ಮಾಡಿದೆ ಎಂದು ನನಗೆ ನೆನಪಿಲ್ಲ. ಸಾಕ್ಷಿಗೆ ಮುಮಾ-2 ರಿಂದ 5 ನ್ನು ತೋರಿಸುತ್ತಿದ್ದು ಅವುಗಳನ್ನು ಮುಂಡಗೋಡಗೆ ಹೋಗಿ ಪೋಲಿಸರು ಜಪ್ತುಪಡಿಸಿಕೊಂಡಾಗ ನೋಡಿದ್ದೆ ಎಂದು ನುಡಿಯುತ್ತಾರೆ. ಸ್ಥಳವನ್ನುಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ಪೋಲಿಸ್ ಜೀಪ್‌ನಲ್ಲಿ ಹೋಗಿದ್ದು ನನ್ನೊಂದಿಗೆ ಪೋಲಿಸರು , ಬಾಲಾಜಿ ಮತ್ತು ಪೋಲಿಸರು ಹಿಡಿದ ಆರೋಪಿ ಇದ್ದರು. ಆರೋಪಿತನ ಹೆಸರು ನನಗೆ ನೆನಪಿಲ್ಲ. ಮುಂಡಗೋಡದಲ್ಲಿ ಒಬ್ಬ ಆಬರಣ ತಯಾಲರಿಸುವ ಅಗಂಡಿಯಿಂದ ಆಭರಣಗಳನ್ನು ಜಪ್ತುಪಡಿಸಿಕೊಂಡಿದ್ದು ಅಂಗಡಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಮೋಲಿಸರ ವಶದಲ್ಲಿದ್ದ ವ್ಯಕ್ತಿ ಏನು ಹೇಳಿದ ಎಂದರ ನನಗೆ ಗೊತಿತಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

*<u>ಪಾಟೀ ಸವಾಲುಃ ಶ್ರೀಮತಿ ಎಪಿಪಿಯವರಿಂದಃ</u>*

ನಾನು ನಿಪಿ-3 ಪಂಚನಾಮೆಗೆ ದಿಃ 01-12-2008 ರಂದು ಸಹಿ ಮಾಡಿದ್ದೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ವಿನಾಯಕ್ ಪಾಟೀಲ್ ಇತನು ಪೋಲಿಸರ ವಶದಲ್ಲಿದ್ದು ಆತನು ತೋರಿಸಿದ ಹಾಗೇ ಸ್ಥಳ ಪಂಚನಾಮೆಯನ್ನು ತಯಾರಿಸಲಾಯಿತು ಎಂದರೆ ನನಗೆ ವ್ಯಕ್ತಿಯಾರು ಎಂದು ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಆತನು ಮತ್ತು ದೀಪಕ್ ಪಟೇಲ್ ಇತನು ಸೇರಿ ಬೀಗ ಮುರಿದು ಕಳ್ಳತನ ಮಾಡಿದರು ಎಂದು ವಿನಾಯಕ್ ಪಾಟೀಲ್ ಇತನು ಹೇಳಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಪಂಚನಾಮೆಯನ್ನು 5-30 ಇಂದ 6-15 ರವರೆಗೆ ಮಾಡಿದ್ದರು ಎಂದರೆ ನನಗೆ ನೆನಪಿಲ್ಲ.

ಅದೇ ರೀತಿ ದಿಃ 02-12-2008 ರಂದು ನಾನು ಮುಂಡಗೋಡಕ್ಕೆ ಹೋಗಿದ್ದೆ ಎಂದರೆ ದಿನಾಂಕ ನನಗೆ ನೆನಪಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ವಿನಾಯಕ್ ಪಾಟೀಲ ಇತನು ದೀಪಕ್ ಪಟೇಲ್‌ನೊಂದಿಗೆ ಸೇರಿ ತಾನು ಆಭರಣಗಳನ್ನು ಮುಂಡಗೋಡದಲ್ಲಿ ಒಬ್ಬ ಬಂಗಾರದ ವ್ಯಾಪಾರಿಗೆ ಮಾರಾಟ ಮಾಡಿದ್ದಾನೆ ಎಂದು ಮತ್ತು ಸ್ಥಳ ತೋರಿಸುತ್ತೇನೆ ಎಂದು ಹೇಳಿದ್ದ ಎಂದರೆ ಸರಿ ಎಂದು ಸಾಕ್ಷಿಯು ನುಡಿಯುತ್ತಾರೆ.

(ಮುಂದುವರಿದ ಮುಖ್ಯ ವಿಚಾರಣೆಗೆ ಕೋರ್ಟ್ ಸಮಯ ಮುಗಿದ ಕಾರಣ 3 ಗಂಟೆಗೆ ಮುಂದೂಡಲಾಯಿತು)

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು.)*

*ಓ. ಹೇ. ಕೇ. ಸರಿ ಇದೆ.*

ಹೆ. ಪ್ರ. ದ. ನ್ಯಾ. ದಂ. ಕಾರವಾರ